ದಿನ. ಪತ್ರಿಕೆ

Reg No. M 1299
Daily & Weekl

For All Kinds of
Printing & Binding

The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 321] ಮಂಗಳವಾರ 29—6—1943 [3 ಪೈ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್

ತಯಾರಿಕೆ

ವಾಣಿ OR

[Violinist]

ಎಂಬ ಕನ್ನಡ ನಾವಾಜಿಕ ಚಿತ್ರ

ನಿಮ್ಮ ಮನೆರಂಜನೆಗಾಗಿ ಬೇಗನೆ ಬರಲಿದೆ

ನ್ಯಾಯವಿಧಾಯಕ ಸಭೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಂಗಳೂರು; ಜೂನ್ 28

ಸಂಬಳಗಳಲ್ಲಿ ತೋಕಾಮಾಡಿ

ನ್ಯಾ. ವಿ. ಸಭಾಸದರ ಭತ್ಯ 7-8-0 ರಿಂದ ರೂ. 10 ಗೆ ಹೆಚ್ಚಿಸಿ

8 ನೇ ದಿವಸದ ನ್ಯಾ. ವಿ. ಸಭೆಯ ಕಾರ್ಯಕಲಾಪಗಳು 1 ಗಂಟೆಗೆ ಶ್ರಿ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಅರ್ಧ ಗಂಟೆ ಕಾಲ ಪ್ರಶ್ನೋತ್ತರ ನಡೆಯಿತು. ಭದ್ರಾವತಿ ಕಾರ್ಖಾನೆ ಕಲಸಗಳಿಗೆ ಹಿಂದೆ ಪಬ್ಲಿಕ್ ಸರ್ವಿಸ್ ಕಮಿಷನರ ಸಲಹೆಯಂತೆ ನೌಕರನಾಹೆಯು ರನ್ನು ನೇವಿಸಲಾಗುತ್ತಿದೆಯೇ ಎಂದು ಭೀಮಪ್ಪನಾಯಕರು ಪ್ರಶ್ನಿಸಿದರು. ಯು ದ್ದಕ್ಕೋಸ್ಕರ ಇಂಡಿಯಾ ಸರಕಾರಕ್ಕೆ ನ ಮ್ಮ ಸರಕಾರದಿಂದ ಕೊಟ್ಟಿರುವ ಪ್ರೀಮಿ ಯಮ್ಮೆಷ್ಟೆಂದು ಶ್ರೀ ರಮಚಾಂದ್ರರಾ ಯರು ಪ್ರಶ್ನಿಸಿದರು. ಶ್ರೀ ಮರಿಯಪ್ಪ ಮಂತಾದವರ ಬಂಧನದ, ಶ್ರೀ ಯಶೋ ಧರ ದಾಸಪ್ಪನವರ ಇಂಟರ್‌ವೆಂಟು ಬಗ್ಗೆ ಅಧ್ಯಕ್ಷರು ಪ್ರಿವಿಲೇಜಸ್ ಕಮಿಟಿ ಗೆ ಕಳುಹಿಸಲಾಗುತ್ತೆಂದರು.

ತೋತಾ ನಿರ್ಮಾಣಗಳ ಮೇಲಿನ ಚರ್ಚೆ 1–30 ಕ್ಕೆ ಪ್ರಾರಂಭವಾಗಿ ದಿನವೆಲ್ಲಾ ನಡೆಯಿತು

ಅಧಿಕಾರಿಗಳಸಂಬಳ ತೋತಾ, ತುಟಿ ಭತ್ಯ ಹೆಚ್ಚಿಸುವಿಕೆ, ನ್ಯಾ. ವಿ. ಸಭಾಸದರ ಭತ್ಯ ಹೆಚ್ಚಿಸುವ ಒಗ್ಗೆ ಭಾಷಣಗಳಾದವು

ವಿಶೇಷ ವರ್ತಮಾನ

ಎರಡನೇ ರಣರಂಗವನ್ನು ಸ್ಥಾಪಿಸಲು ಮಿ॥ ಸ್ಟಾಲಿನ್ನರು ಮಿ॥ ರೂಸ್ವೆಲ್ಟರನ್ನು ತಮ್ಮ ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಒತ್ತಾಯಪಡಿಸಿದರು.

ಜರ್ಮನಿಯು ಅನೇಕ ಮುಖ್ಯ ಸ್ಥಳಗಳ ಮೇಲೆ ಆರ್. ಎ ಎಫ್, ನವರ ಧಾಳಿ ನಡೆಯಿತು.

ಜಪಾನೀ ರಾಜ್ಯಗಳ ಮೇಲೆ ಅಮೇರಿಕಾ ವಿಮಾನ ಧಾಳಿ ನಡೆಯುವುದೆಂದು ಜಪಾನರು ನಿರೀಕ್ಷಿಸುತ್ತ್ತಾ, ತಮ್ಮ ಎ. ಆರ್. ಪಿ. ಕಾರ್ಯಕ್ರಮವನ್ನು ಭದ್ರ ಪಡಿಸುತ್ತಿರುವರು.

ಜರ್ಮನ್ ಸಬ್‌ಮೆರೀನಿನ 200 ಮಂದಿ ನಾವಿಕರು ಕೆಲಸಮಾಡಲು ಹಿಂತೆಗೆದು ದುದಂದ ಖೈದು ಮಾಡಲ್ಪಟ್ಟಿರುವರು.

ಜರ್ಮನರ ಅತ್ಯಾಚಾರಕ್ಕೆ ಅಸ್ಸಾದವರು ಸರಿಸಾರ ಕೇಳಿಸುವಂತೆ ದು ಹೇಳಲಾಗಿದೆ.

ವಿಕ್ಟರ ದಂಡೆಯಾತ್ರೆಯಾಗಿವ ಭಯವು ಅಕ್ಷರಾಜ್ಯಗಳನ್ನು ತಲುಪಾ ಪೀಡಿಸುತ್ತಿದೆ.

ಆಹಾರ ಪದಾರ್ಥಗಳ ಜಿಲೆ ಏರುವಿಕೆಗೆ ಕಾರಣಭೂತರಾದ ದಾನ್ಯ ಶೇಖರಿಸುವವರನ್ನು ಸೆಲ್ಲೂರಿನಲ್ಲಿ ಗಾರ್ನರರ ಅಡ್ವೈಲರು ನಿಂದಿಸಿದರು.

Opera — Aryamala — 7th Week

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ
ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಅಪೆರಾ ಟಾಕೀಸ್
ಆರ್ಯಮಾಲಾ ೪ 7 ನೇವಾರ

ಯೂರೋಪಿನ ಯುದ್ಧ

ಈಗ ಯೂರೋಪಿನಲ್ಲಿ ಯುದ್ಧವು ತಹಾಗೆ ಕಾಣುವುದು. ಯಾರೂ ಸುಮ್ಮನೆ ಕೂತಿಲ್ಲ. ದೊಡ್ಡ ಯುದ್ಧ ಹೂಡಲು ಎಲ್ಲರೂ ಅಣಿಮಾಡಿಕೊಳ್ಳುತ್ತಿರುವರು. ರಷ್ಯಾದಲ್ಲಿ ಜರ್ಮನರ ಇನ್ನೂರು ಡಿವಿಜ್ಞ್ ಸೇನೆಗಳಿವೆ. ಇವನ್ನು ಮುಖ್ಯವಾದಕಡೆಗಳಲ್ಲಿಟ್ಟಿರುವರು.

ಮಾಸ್ಕೊಗೆ ದಕ್ಷಿಣದಲ್ಲಿ ಬರೆಲ್ ನಲ್ಲಿ ಹೆಚ್ಚಾಗಿ ಸೇನೆಯಿದೆ. ಬೈಯಲ್ಸ್ಕ್ ಬಹು ಮುಖ್ಯವಾದ ಕ್ಷೇತ್ರವಾಗಿದೆ. ದಕ್ಷಿಣದಿಂದ ರಾಜಧಾನಿಗೆ ನುಗ್ಗಲು ವಿಶ್ವಪ್ರಯತ್ನ ಮಾಡುವಂತಿದೆ. ಈಗ ಕ್ರೂಬನ್ನಿನಲ್ಲಿ ಚಟುವಟಿಕೆ ನಡೆಯುತ್ತಿದೆ. ಇದು ಕಾಕಸಸ್‌ಗೆ ಹೆಬ್ಬಾಗಿಲು. ಟವ್ಕ ಪರಾಯದ್ವೀಪದಲ್ಲಿ ಗೇಣುದ್ದ ಸ್ಥಳವನ್ನು ಜರ್ಮನರು ಬಹು ಕಷ್ಟದಿಂದ ಪ್ರತಿ ದಿವಸವು ವಿಶೇಷ ನಷ್ಟ ಪಟ್ಟು ಕೊಂಡೂ ಇಟ್ಟುಕೊಂಡಿರುವುದರ ಕಾರಣ, ಈ ಸ್ಥಳದಿಂದ ರಷ್ಯನು ಕ್ರಿಮಿಯಾ ಮುಖಾಂತರದಿಂದ ಉಕ್ರೇನಿಗೆ ಹಾರಬಹುದೆಂದೇ?

ಜರ್ಮನಿಯರು ಇಷ್ಟು ಅಗಾಧ ಸೇನೆಯನ್ನು ಇಟ್ಟುಕೊಂಡರೂ, ಬೇಸಿಗೆ ಕಾಲ ಬಂದರೂ ಏಕೆನುಗ್ಗುತ್ತಿಲ್ಲ? ಹಿಂದಿನ ವರ್ಷ ಜರ್ಮನರು ಮಾಡಿದ್ದನ್ನು ಜ್ಞಾಪಕಕ್ಕೆ ತಂದುಕೊಂಡರೆ ತಿಳಿಯುವುದು. ಆಗಲೇ ಒಂದು ತಿಂಗಳ ಮೇಲೆ ಕಳೆದು ಹೋಯಿತಲ್ಲವೇ? ಟುನಿಸಿಯಾದಲ್ಲಿ ತಮಗಾದ ಅಪಜಯವೂ ರೋಪಿನಲ್ಲಿ ಎರಡನೇ ರಣರಂಗವು ಎಲ್ಲಿ ಯಾವಾಗ ಆರಂಭವಾಗುತ್ತದೋ ಎಂಬ ಭಯವಲ್ಲದೆ ಮತ್ತೇನೂ ಇಲ್ಲ. ಮಿತ್ರ ಪಕ್ಷದವರು ಎಲ್ಲಾ ಕಡೆಗಲ್ಲಿಯೂ ಧಾಳಿ ಮಾಡುತ್ತಿದ್ದರೂ ತಾವು ರಣ್ಯಾರಣ ರಂಗವನ್ನು ಬಿಡಲು ಮನಸ್ಸುಮಾಡಿಲ್ಲ. ಜರ್ಮನರಿಗೆ ವಿಮಾನ ತಯಾರಿಕೆ ಕಮ್ಮಿಯಾಗಿದೆಯೆಂದು ಎಲ್ಲರೂ ಒಪ್ಪಲೇ ಬೇಕು. ಆದೇರಿಕಾದವರು ವಿಮಾನ ತಯಾರಿಕೆಯನ್ನು ಹೆಚ್ಚಿಸಿ ರಷ್ಯಾದಲ್ಲಿ ಇದನ್ನು ಉಪಯೋಗಿಸುತ್ತಿರುವರು. ಜರ್ಮನರ ವಿಮಾನಸಂಖ್ಯೆಯು ಈಗ ರಷ್ಯಾದಲ್ಲಿ ಮುಂಚಿನಂತಿಲ್ಲ. ಇದನ್ನೆಲ್ಲಾ ನೋಡಿ ಜರ್ಮನರು ಈಗ ಮುಂದೆ ನುಗ್ಗುವುದನ್ನು ಬಿಟ್ಟಿರುವರೆಂದು ತಿಳಿಯಬಾರದು. ರಷ್ಯಾದಲ್ಲಿ ಜರ್ಮನರು ತಾವೇ ಮುಂದೆ ನುಗ್ಗಿ ರಷ್ಯಾ ಸೇನೆಯನ್ನು ನಾಶಮಾಡಿ ತಮ್ಮ ಕೈಯನ್ನು ಮೇಲೆ ತೋರಿಸಬೇಕೆಂದಿರಬಹುದು ರಷ್ಯನರು ಸುಮ್ಮನೆ ಕೂತಿಲ್ಲ. ಶತ್ರುವನ್ನು ನಿರ್ಮೂಲ ಮಾಡಲು ಕಾತುರರಾಗಿ ಸಮಯ ಕಾಯುತ್ತಿರುವರು

ಜರ್ಮನರಿಗೆ ಯುದ್ಧ ಸಾಮಗ್ರಿಗಳೂ ವಿಮಾನಗಳೂ ಸಬ್‌ಮೆರೀನುಗಳೂ ಒಳ್ಳೇ ಬೆಂಬಲವಾಗಿವೆ. ಈಗ ಮಿತ್ರಪಕ್ಷದವರ ವಿಮಾನ ತಯಾರಿಕೆಯು ಜರ್ಮನಿಗಿಂತ ಹೆಚ್ಚಿದೆ. ಆಫ್ರಿಕಾ ಯುದ್ಧದಿಂದ ಇದು ವ್ಯಕ್ತವಾಯಿತು. ಅಂದಿನಿಂದಲೂ ಮಿತ್ರಸೇನೆಗಳು ಬಂದಾಗ ಶತ್ರು ವಿಮಾನವು ಅನೇಕ ವೇಳೆ ಕಣ್ಣಿಗೆ ಬೀಳಲೇ ಇಲ್ಲ, ಬಿದ್ದ ಕಡೆ ಅತಿ ಸ್ವಲ್ಪವೆನ್ನಬಹುದು.

ಈಗ ಮಿತ್ರವಿಮಾನಗಳು ಧಾಳಿ ಮಾಡತ್ತಿಲ್ಲವೇ, ಆ ಸ್ಥಳಗಳಲ್ಲಿ ಶತ್ರುಗಳು ತಮ್ಮ ಜನಂಗೆ ಸರಬರಾದ ಸಹಾಯ ಮಾಡುತ್ತಿಲ್ಲವಾದುದರಿಂದ ಶತ್ರುಗಳ ವಿಮಾನ ಬಹಳ ಕಡಮೆಯಾಗಿದೆಯೆಂದು ತಿಳಿಯಬಹುದು.

ಮಿತ್ರರು ವಿಮಾನಧಾಳಿ ಮಾಡಿದರು, ಇದರಿಂದ ಪ್ರಜೆಗಳು ಸಕ್ಕರು, ಹೀಗೆ ಮಾಡುವುದು ಸರಿಯಲ್ಲ ಎಂಬುದಾಗಿ ಯುದ್ಧಕ್ಕೆ ಸೇರದವರಿಂದ ಜರ್ಮನರು ಈಗ ಕೇಳಿಸುತ್ತಿರುವರು. ಜರ್ಮನರು ತನ್ನ ಸಬ್‌ಮೆರೀನುಗಳಿಂದ ಪ್ರಪಂಚವನ್ನೇ ಗೆಲ್ಲುವೆನೆಂದು ಒದರಾಡಿಕೊಳ್ಳುತ್ತಿರುವರು. ಮಿತ್ರ ನೌಕೆಗಳು ಆಫ್ರಿಕಾದಲ್ಲಿ ಒಂಟಿಳಿದಾಗ ಪಕ್ಕಕ್ಕೆ ಬಂದು ಸುಮ್ಮನಿದ್ದರು ಮಿತ್ರರ ಕಾರ್ಯವಾಯ್ ಸಂರಕ್ಷಣೆ ಈಗ ಚೆನ್ನಾಗಿದ್ದೆ, ಹಡಗುಗಳ ತಯಾರಿಕೆ

ಬಡವರಿಗೆ ಬಟ್ಟೆ

ಬಡವರಿಗೆ ಬಟ್ಟೆಗಳಿಲ್ಲ ! ಈ ಸಮಸ್ಯೆಯ ಮೇಲೆ ಈ ಪತ್ರಿಕೆಯಲ್ಲಿ ಎಷ್ಟೋ ಲೇಖನಗಳು ಬಂದಿವೆ. ಬಜಾರಿನಲ್ಲಿ ಬಟ್ಟೆಗಳಿಲ್ಲವೇ ? ಬೇಕಾದಷ್ಟಿದೆ. ಅದನ್ನು ಬಡವರು ಮುಟ್ಟುವಂತಿಲ್ಲ ? ಏಕೆಂದರೆ ಬಡವರು ಅಷ್ಟು ದುಡ್ಡು ಕೊಡಲಾರರು ! ಬಟ್ಟೆಯ ಬೆಲೆ ಒಂದಕ್ಕೆ ನಾಲ್ಕುಮರೆಯಾಗಿದೆ. ಇದನ್ನು ಜನರು ಹೇಗೆ ಕೊಳ್ಳುವುದು ? ಈಗ ಬಟ್ಟೆಯ ವ್ಯಾಪಾರವೆಲ್ಲಾ ರಾಜಕೀಯೋಪಾಯಿಗಳ ಬ್ಲಾಕ್ ಮಾರ್ಕೆಟ್ಟೇ ಆಗಿಹೋಗಿದೆ

ಮೈಸೂರುದೇಶದ ಜನರಿಗೆ ಅತಿ ಕಷ್ಟವೆಂದರೆ ಹದಿನೈದು ಕೋಟಿ ಗಜ ಬಟ್ಟೆ ಬೇಕು. ಇದು ಸಾದಾಬಟ್ಟೆಗೆ ಈಗ ಇರುವ ಬೆಲೆಗೆ ಅರ್ಧಬೆಲೆಗೆ ಸಿಕ್ಕುವಂತೆ ಮಾಡಬೇಕು.

ಇದಕ್ಕೆ ಎರಡು ಮಾರ್ಗಗಳಿವೆ. ನೂಲಿನಬೆಲೆಯನ್ನು ಹತೋಟಿ ಮಾಡಬೇಕು. ಆ ನೂಲು ನಮ್ಮ ದೇಶದ ಎಲ್ಲಾ ಊರುಗಳಲ್ಲಿಯೂ ಸರಸರಾಜಾಗಬೇಕು. ಪ್ರತಿ ಊರಿನಲ್ಲಿಯೂ ನೇಯುವ ಮಗ್ಗಗಳನ್ನಿಡಿಸಿ ಸಾದಾ ಬಟ್ಟೆಯನ್ನು ನೇಯುವಂತೆ ಏರ್ಪಾಡು ಮಾಡಬೇಕು. ಇದು ಇಂದೆರಡು ತಿಂಗಳಲ್ಲಿ ಪೂರೈಸುವ ಕೆಲಸವಲ್ಲ. ಒಹಳ ಪ್ರಯತ್ನಪಟ್ಟರೆ ಆರು ತಿಂಗಳಲ್ಲಿ ಕ್ರಮಕ್ಕೆ ತರಬಹುದು. ಮತ್ತೊಂದು ಮಾರ್ಗವೆಂದರೆ ನಮ್ಮ ದೇಶದಲ್ಲಿ ಅನೇಕ ಗಿರಣಿಗಳಿವೆ. ಆ ಗಿರಣಿಗಳಲ್ಲಿ ಸುಲಭ ಬೆಲೆಯ ಸಾದಾ ಬಟ್ಟೆಯನ್ನೇ ತಯಾರುಮಾಡುವ ಕಾರ್ಯಕ್ರಮವನ್ನು ಜಾರಿ ಮಾಡಬೇಕು. ಆಲ್ಲಿ ತಯಾರಾದ ಬಟ್ಟೆಗಳನ್ನೆಲ್ಲಾ ಸರ್ಕಾರವೇ ವಹಿಸಿಕೊಂಡು ಊರುಊರುಗಳಲ್ಲಿಲ್ಲಿರುವ ಲೈಸೆನ್ಸ್ ಕೋಠಿಗಳನ್ನಿಟ್ಟು ಮಾರುವಂತೆ ಏರ್ಪಾಟು ಮಾಡಬೇಕು.

ಇದರಲ್ಲಿ ವರ್ತಕರು ಮಾತ್ರವೇ ಅತ್ಯಧಿಕ ಲಾಭ ಸಂಪಾದನೆ ಮಾಡುತ್ತಿದ್ದಾರೆಂದು ಭಾವಿಸುವದು ತಪ್ಪು. ಗಿರಣಿಗಳವರು ಲೆಕ್ಕಾಚಾರಕ್ಕಿಂತ ಬಹಳ ಲಾಭ ಹಾಕಿ ಬಟ್ಟೆಯನ್ನು ಮಾರುತ್ತಾರೆ. ಎರಡನೆಯವರು ಗಿರಣಿಗಳ ಏಜೆಂಟರುಗಳು ಇವರು ಲಕ್ಷಾಂತರ ರೂಪಾಯಿಗಳ ಲಾಭ ಸಂಪಾದಿಸುತ್ತಾ ಇದ್ದಾರೆ. ಅನಂತರ ಹಣವುಳ್ಳವರು ಜವುನತೆಗೆ ಈ ವ್ಯಾಪಾರಕ್ಕೆ ಕೈ ಹಚ್ಚಿದ್ದೇ ತಡ ವರೆಲ್ಲಾ ಈಗ ನೂರಾರು ಸಾವಿರಾರು ಬೇಲು ಬಟ್ಟೆಗಳನ್ನು ಕೊಂಡು ಹಾಕಿತ್ತಿದ್ದಾರೆ ಇಲ್ಲಿಂದಲೇ ಬ್ಲಾಕ್ ಮಾರ್ಕೆಟ್ಟಿನ ಸಾರಂಭ ! ಅದೇ ಕಸುಬು ಮಾಡುವ ಸಟ್ಟಾ ವ್ಯಾಪಾರಿಗಳು ಇನ್ನೂ ಗಳಿಗೆಲ್ಲಾ ಕ್ರೂರವಾದ ಶಿಕ್ಷೆಯನ್ನು ಮಾಡಬೇಕೆಂದು ಅನೇಕ ಮುಖಂಡರು ಅಭಿಪ್ರಾಯಪಟ್ಟಿರುತ್ತಾರೆ.

ಇಂಡಿಯಾ ಸರಕಾರದವರು ಈ ವಿಷಯದಲ್ಲಿ ಬಹಳವಾಗಿ ಪರಾಲೋಚಿಸುತ್ತಿದ್ದಾರೆ. ವೈಸರಾಯಿ ಮಂತ್ರಿಮಂಡಿಲದ ಸಚಿವರು ಈ ವಿಷಯದಲ್ಲಿ ಹತತೊಟ್ಟಿರುತ್ತಾರೆ ಇದರಿಂದ ಒಡಬನರಿಗೆ ಎಷ್ಟೋ ಧೈರ್ಯ ಬಂದಿದೆ

ಮೈಸೂರು ಸರಕಾರದವರು ಈ ವಿಷಯದಲ್ಲಿ ವಿಶೇಷವಾಗಿ ಪರ್ಯಾಲೋಚಿಸುತ್ತಿದ್ದಾರೆ. ಭದ್ರವಾದ ಕಾನೂನುಗಳನ್ನು ಮಾಡದೇ ಒಟ್ಟೇ ಸರಸರಾಜಿನ ಕಾರ್ಯಗಳಿಗೆ ವಿಘಾತವನ್ನು ಮಾಡುತ್ತಿರುತ್ತಾರೆ. ಈ ಏರ್ಪಾಡುಗಳು ಇನ್ನೂ ಹೆಚ್ಚು ಹೆಚ್ಚಾಗಿ ಆಡಿಯಬೇಕು.

ನೇಯುಗೆಯವರು ತಮ್ಮ ತಮ್ಮಲ್ಲಿ ಸಂಘಗಳನ್ನು ಏರ್ಪಡಿಸಿಕೊಂಡು, ನೇಯುಗೆಯವರಿಗೆಲ್ಲಾ ಮಗ್ಗಗಳನ್ನು ಕೊಡಿಸುವ ಏರ್ಪಾಡು ಮಾಡಬೇಕು. ನಮ್ಮ ಸರಕಾರದ ಇಂಡಸ್ಟ್ರಿಯಲ್ ಇಲಾಖೆಯವರು ಇದಕ್ಕೆ ಸಹಾಯ ಮಾಡುತ್ತಾರೆ. ನೇಯುಗೆ ಸಂಘಗಳವರು ಸರಕಾರದವರನ್ನು ಕೇಳಿ ನೂಲನ್ನು ಸರಸರಾಜು ಮಾಡಿಕೊಳ್ಳಬೇಕು

ಗಿರಣಿಗಳವರೂ ಕೂಡ ಬಜಾರುಗಳಲ್ಲಿ ತಮ್ಮ ಖಾಸ್ ಡಿಪೋಗಳನ್ನಿಟ್ಟು ಜನರಿಗೆ ಸಾಧ್ಯವಾದಬಟ್ಟೆಗಳು ವಿಲೇಜಿಲೆಗೆ ಸಿಕ್ಕುವಂತೆ ಏರ್ಪಾಡು ಮಾಡಬೇಕು.

ಈತ ಶೀಘ್ರದಲ್ಲೇ ಕಠಿಣವಾದ ಕಾನೂನುಗಳು ಬರುತ್ತವೆ. ವರ್ತಕರೂ ದಳ್ಳಾಳಿಗಳೂ ಗಿರಣಿಯ ಯಜಮಾನರುಗಳೂ ಸುಲಭ ಬೆಲೆಗೆ ಸಾದಾ ಬಟ್ಟೆಗಳನ್ನು ಜನರಿಗೆ ಸರಸರಾಜು ಮಾಡಿದರೆ ಮಹತ್ತರವಾದ ದೇಶಸೇವೆ ಮಾಡಿದಂತಾಗುವುದು (ರಾ. ರ)

ಉಪ್ಪೇ ಸಕ್ಕರೆಯೇನು ?

ಬ್ರಿಟಿಷ್ ರೈತರು ಬೀಟು ಪೈರನ್ನು ಹಾಕುವುದಕ್ಕೆ ಮುಂಚೆ ಜಮೀನಿಗೆ ಉಪ್ಪು ಹಾಕುವರು. ಬೀಟಿನಿಂದ ಸಕ್ಕರೆ ತಯಾರಿಸಿದಾಗ ಆ ಬೀಟಿನಿಂದ ದೊರೆಯುವ ಸಕ್ಕರೆಯ ಪರಿಮಾಣವು ಭೂಮಿಗೆ ಹಾಕಿದ ಉಪ್ಪಿನ ಪ್ರಮಾಣದಷ್ಟು ಹೆಚ್ಚಾಗಿರುವುದಂತೆ.

ಚಂದಾದಾರರಲ್ಲಿ ವಿಜ್ಞಾಪನೆ

ಒಂದು ವಾರದ ಹಿಂದೆ ನಮ್ಮ ಮುದ್ರಣಯಂತ್ರಕ್ಕೆ ಅಕಸ್ಮಾತ್ತಾಗಿ ತಂಬಾ ಜಖಂ ಆಗಿ ಅಂದಿನಿಂದ ಪತ್ರಿಕೆ ಪ್ರಕಟಣೆ ಸಕಾಲದಲ್ಲಿ ಆಗುವುದಕ್ಕೆ ಅತಂಕವಾಗಿದೆ. 3-4 ದಿನಗಳಲ್ಲೇ ಎಲ್ಲಾ ಸರಿ ಮಾಡಲ್ಪಟ್ಟು ಪತ್ರಿಕೆಯು ಸರಿಯಾಗಿ ಪ್ರಕಟಿಸಲ್ಪಡುವುದು. ವಾಚಕವಹಾಶಯರು ಈ ಅಲ್ಪ ಅನಾನುಕೂಲವನ್ನು ಮನ್ನಿಸಬೇಕಾಗಿ ಕೋರುತ್ತೇವೆ.

ಮ್ಯಾನೇಜರ್

ಭೂಸೈನ್ಯದಲ್ಲಿ ಜರ್ಮನಿಗೆ ರಷ್ಯನರು ಎದೆಕಟ್ಟಿ ನಿಂತಿರುವರು. ರಷ್ಯನರು ಜರ್ಮನರಿಗೇನೂ ಭೂಸೈನ್ಯದಲ್ಲಿ ಕಮ್ಮಿಯಾಗಿಲ್ಲ. ಮಿತ್ರರು ಹೀಗೆ ಜರ್ಮನರ ಬಲಾಬಲಗಳನ್ನು ನೋಡಿ ಮುಂದಿನ ಕೆಲಸ ಮಾಡಬೇಕೆಂದಿರುವರು. ಮಿತ್ರರು ರಷ್ಯಾದನರ ಬಲವನ್ನೂ ತೂಕ ಮಾಡುತ್ತಿರುವರು. ಈ ಬೇಸಿಗೆಯಲ್ಲಿ ಮಿತ್ರರು ಗ್ರೀಸ್, ಇಟಲಿ, ಫ್ರಾನ್ಸ್ ಹಾಲೆಂಡ್ ಅಥವಾ ಉತ್ತರ ಯೂರೋಪು ಈ ಕಡೆಗಳಲ್ಲಿ ಒಂದು ಕಡೆ ಇಲ್ಲವೇ ನಾನಾ ಭಾಗಗಳಲ್ಲಿ ಮಿತ್ತಿಗೆಯನ್ನು ಏಕ ಕಾಲದಲ್ಲಿ ಮಾಡುವರು. ಈಗ ಮಿತ್ರರು ಶತ್ರುಗಳ ಕೈಗಾರಿಕೆ ಸ್ಥಳಗಳನ್ನು ನಾಶ ಮಾಡುತ್ತಿರುವರು. ಬಲು ಬೇಗನೆ ತಮ್ಮ ಸೇನೆಗಳನ್ನು ಶತ್ರು ದೇಶಗಳ ಒಳಕ್ಕೆ ಕಳಿಸುವರು.

Ranjit Talkies
Krishna Sudhama
24—6—43 ರಿಂದ
ಅಚ್ಚಾನೆ ಚಿತ್ರಿಸಿದ ನಟನಟಿಯರು ಪಾತ್ರನಹಿಸಿರುವ ಮತ್ತು ಸಕಲರೂ ನೋಡತಕ್ಕ ಮಹೋನ್ನತ ಪೌರಾಣಿಕಚಿತ್ರ (ಕನ್ನಡ)
ಕೃಷ್ಣಸುಧಾಮ
ಎಣಿ
ರಣಜಿತ್ ಟ್ರಾಕೇಸಿನಲ್ಲಿ
ಪ್ರತಿ ದಿನ 3 ಆಟಗಳು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಶಕ್ತಿ ಪಾಲ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದು

ಪ್ರಕಟಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ